ಉಪಾಧ್ಯಕ್ಷರು : ತೀವ್ರತೆಯನ್ನು ಅರ್ಥ ಮಾಡಿಕೊಂಡು ಬಹಳಷ್ಟು ಅವಕಾಶ ಮಾಡಿಕೊಟ್ಟಿದ್ದೇನೆ. ಇದರ ಬಗ್ಗೆ ಯಾರಾದರೂ ಒಬ್ಬರು ಹಾಫ್ ಎನ್ ಅವರ ಡಿಸ್ಕಷನ್‌ಗೆ ಕಳುಹಿಸಿ. ಇದರ ಬಗ್ಗೆ ಇನ್ನು ಚರ್ಚೆ ಸಾಕು. ಇದನ್ನು ಮುಂದುವರಿಸುವುದು ಬೇಡ.

ಗ್ರಾಮೀಣ ಪ್ರದೇಶದ ಆರೋಗ್ಯ ಘಟಕಗಳಲ್ಲಿ ಸಿಬ್ಬಂದಿ ಕೊರತೆ.

102 - ಶ್ರೀ ಜಿ.ಬಿ. ಶಿವಕುಮಾರ್ (ನಾಗಮಂಗಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರಾ?

ಅ) ಗ್ರಾಮೀಣ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಆರೋಗ್ಯ ಘಟಕಗಳಲ್ಲಿ ವೈದ್ಯರ ಸಿಬ್ಬಂದಿಯ ಹಾಗೂ ಔಷಧಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಯಾವ ಆರೋಗ್ಯ ಘಟಕ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕೊರತೆಗಳಿವೆ?

ಇ) ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳು ಯಾವುವು?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಂದಿದೆ.

ಆ) ವಿವರಗಳು ಪಟ್ಟಿ ಲಗತ್ತಿಸಿದೆ. ಔಷಧಿಗಳನ್ನು ವಾರ್ಷಿಕ ಅನುದಾನದಿಂದ ಪೂರೈಸಲಾಗಿದೆ.

ಇ) ವೈದ್ಯರ ಕೊರತೆಯನ್ನು ತುಂಬುವ ಸಲುವಾಗಿ ಗುತ್ತಿಗೆ ಆಧಾರವಾದ ಮೇಲೆ ಹಾಗೂ ಕರ್ನಾಟಕ ಲೋಕಸೇವಾ ಆಯೋಗದಿಂದ ಅಭ್ಯರ್ಥಿಗಳನ್ನು ಆಯ್ದು ನೇಮಕ ಮಾಡುವ ಬಗ್ಗೆ ಆರ್ಥಿಕ ನಿಬಂಧನೆ ತೆರವಿಗಾಗಿ ಕಾಯಲಾಗಿದೆ. ಔಷಧಿಗಳನ್ನು ವಾರ್ಷಿಕ ಅನುದಾನದಂತೆ ಪೂರೈಸಲಾಗಿದೆ.

ಶ್ರೀ ಜಿ.ಬಿ. ಶಿವಕುಮಾರ್ : ಮಾನ್ಯ ಅಧ್ಯಕ್ಷರೇ ಈಗ ತಾನೇ ರಾಜ್ಯಾದ್ಯಂತ ಇರತಕ್ಕ ಸಮಸ್ಯೆಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಬೇಕು ಎನ್ನುವ ರೀತಿ ತಿಳಿಸಿರಿ ಅದೇ ರೀತಿಯದ್ದೇ ಈ ಪ್ರಶ್ನೆ ಕೂಡ. ಗ್ರಾಮಾಂತರ ಪ್ರದೇಶದ ಪರಿಸ್ಥಿತಿ ಏನಾಗಿದೆ ಎಂದು ಖುದ್ದು ವೈದ್ಯರಾಗಿರತಕ್ಕ ಸಮ್ಮ ಆರೋಗ್ಯ ಸಚಿವರಿಗೆ ಗೊತ್ತಿದೆ. ಸಚಿವರು ಕೊಟ್ಟಿದ್ದಾರೆ ಗ್ರಾಮೀಣ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಆರೋಗ್ಯ ಘಟಕಗಳಲ್ಲಿ ವೈದ್ಯರ ಸಿಬ್ಬಂದಿಯ ಹಾಗೂ ಔಷಧಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಗೆ ಉತ್ತರ ಬಂದಿದೆ ಎಂದು ಕೊಟ್ಟಿದ್ದಾರೆ. ಎರಡನೆಯ ಪ್ರಶ್ನೆ ಮಂಡ್ಯ ಜಿಲ್ಲೆಯಲ್ಲಿ ಯಾವ ಆರೋಗ್ಯ ಘಟಕ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕೊರತೆಗಳಿವೆ ಎಂಬುದಕ್ಕೆ ಪಟ್ಟಿಯನ್ನು ಲಗತ್ತಿಸಿದ್ದಾರೆ. ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳು ಯಾವುವು? ಅವರು ಕೊಟ್ಟಿರತಕ್ಕ ಉತ್ತರದಿಂದ ನಾನು ತೃಪ್ತನಾಗಿದ್ದೇನೆ. ಆದರೆ ನಾನು ಒಂದು ಪತ್ರ ಇಲ್ಲಿಡುತ್ತೇನೆ ಉಪಾಧ್ಯಕ್ಷರೆ ಕೇವಲ ನನ್ನ ಮತ ಕ್ಷೇತ್ರದಲ್ಲಿ ಸಿಬ್ಬಂದಿಯವರ

ಮಂಡ್ಯ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳ ವಿವರ

ಕ್ರ ಸಂ.	ಪ್ರಾ ಆ ಘಟಕ : ಕೇಂದ್ರ ಸಾರ್ವಜನಿಕ ಆಸ್ಪತ್ರೆ ಗಳ ಹೆಸರು	ಹಿಮ ಸ	ಕಿಮ ಅಸ	ಕ್ಷೇತ್ರ ಅಶಿ	ಹಿಪು ಅಸ	ಕಿಪು ಅಸ	ಪ್ರಸಾ ತಂತ್ರಜ್ಞ	ಪ್ರದನ	ಗ್ರೂಪ್ ಡಿ
1	2	3	4	5	6	7	8	9	10
ಮಳವಳ್ಳಿ ತಾಲ್ಲೂಕು									
1)	ಮಳವಳ್ಳಿ								7
2)	ಹಲಗೂರು		2	1	—	2	1	1	—
3)	ಅಗಸನಪುರ		3	1	—	1	—	1	—
4)	ಕಿರುಗಾವಲು		1	—	1	1	1	1	2
5)	ಬೆಳಕವಾಡಿ		2	1	—	1	2	1	5
6)	ಡಿ.ಕೆ.ಹಳ್ಳಿ					1	1	—	1
7)	ಕಲ್ಕುಣಿ					1	1	—	—
8)	ಕಂಬೇಗಾಲ		1	—	—	1	1	1	—
9)	ಯತ್ತಂಬಾಡಿ		1	—	—	1	—	—	—
10)	ನಿಟ್ಟೂರು		1						
11)	ದುಗ್ಗನಹಳ್ಳಿ		1						1
12)	ಹಿ.ಹ ದೊಪ್ಪಲು		3	1					
ಮದ್ದೂರು ತಾಲ್ಲೂಕು:									
1)	ಮದ್ದೂರು								
2)	ಕೆಸ್ತೂರು	2	3	—	1	1	—	1	—

1	2	3	4	5	6	7	8	9	10
ಮಳವಳ್ಳಿ ತಾಲ್ಲೂಕು									
3)	ಕೊಪ್ಪ	1	3	1	—	2	1	1	5
4)	ಕೆ.ಎಂ.ದೊಡ್ಡಿ	—	2	1	—	1			
5)	ಗುರುದೇವರಹಳ್ಳಿ		1	1	1	1	—	1	—
6)	ಬೆಸಗರಹಳ್ಳಿ	—	1		0	—	1	1	—
7)	ಕದಲೂರು						1	—	—
8)	ಡಿ.ಎ.ಕೆರೆ	1				2	1	—	1
9)	ವಳಗೆರೆಹಳ್ಳಿ					1	1	1	2
10)	ಬೀದರಕೋಟೆ								1
11)	ಹಾಗಲಹಳ್ಳಿ								1
ಶ್ರೀರಂಗಪಟ್ಟಣ ತಾಲ್ಲೂಕು									
1)	ಶ್ರೀರಂಗಪಟ್ಟಣ					1			
2)	ಕೊಡಿಯಾಲ					1	1	—	—
3)	ಅರಕೆರೆ		1			2	1	1	1
4)	ಕೆ. ಶೆಟ್ಟಹಳ್ಳಿ	1	1		1	1	1	1	—
5)	ಮಹದೇವಪುರ	2	2	1	—	3			1
6)	ಟಿ.ಎಂ ಹೊಸೂರು	-	1						1
7)	ಯುನಾನಿ ಶ್ರೀರಂಗಪಟ್ಟಣ	1							
ನಾಗಮಂಗಲ ತಾಲ್ಲೂಕು									
1)	ನಾಗಮಂಗಲ					1	1	1	1
2)	ಆದಿಚುಂಚನಗಿರಿ	1	3	—	1	1	—	—	2

1	2	3	4	5	6	7	8	9	10
3)	ಬೆಳ್ಳೂರು	1	5	1	1	3	1	1	—
4)	ಹರದನಹಳ್ಳಿ		3	1	—	—	—	1	1
5)	ಬಂಡಿಗನವಿಲೆ	2	2			2	1	1	1
6)	ಬಿಳಿಗುಂದ		1						1
7)	ಕೆಲಗೆರೆ								1
8)	ಕದಬಳ್ಳಿ					1			
9)	ಚೀಣ್ಯ	4							
10)	ದೇವಲಾಪುರ	1							
11)	ಬೋಗಾಧಿ	1							
ಮಂಡ್ಯ ತಾಲ್ಲೂಕು									
1)	ಶಿವಳ್ಳಿ	1	3	—	2	4			
2)	ಕೊತ್ತತ್ತಿ					2			
3)	ಬಸವರಾಳು	1	2	1	—	1	2	—	1
4)	ಕೀಲಾರ		3	—	1	—	1	1	—
5)	ಹೊಳಲು	—	1			1	1	1	1
6)	ಚಂದಗಾಲು					1	1	1	1
7)	ಮುದಗಂದೂರು		3				1		2
8)	ತಗ್ಗಳ್ಳಿ	1	1				1		
9)	ಹಳೇಬೂದನೂರು				1	—	1	—	1
10)	ಸೂನಗಳ್ಳಿ					1	1		
11)	ಹೆಮ್ಮಿಗೆ						1		

1	2	3	4	5	6	7	8	9	10
12)	ಗೊರವಾಲೆ					1	1	1	—
13)	ಬೇಲೂರು		1						
14)	ಮುತ್ತಗೆರೆ		1						
15)	ಕೆರೆಗೋಡು		1						
16)	ದೊಡ್ಡಬಣಸವಾಡಿ		1						
ಪಾಂಡವಪುರ ತಾಲ್ಲೂಕು									
1)	ಪಾಂಡವಪುರ	1	1	—	—	2	1	1	
2)	ಚಿನಕುರಳಿ		1		1	1	1	1	
3)	ಬನ್ನಂಗಾಡಿ		3			1	1	1	
4)	ಕೆರೆಕೊಣ್ಣೂರು					1	1	1	
5)	ಬೆಳ್ಳಾಳೆ					1			
6)	ಮೇಲುಕೋಟೆ	1			1	—	1		
ಕೃಷ್ಣರಾಜಪೇಟೆ ತಾಲ್ಲೂಕು									
1)	ಕೆ.ಆರ್. ಪೇಟೆ	2	7	—	1	1	2	1	1
2)	ಶೀಳನರ್	1	3	1	1	2	1	1	1
3)	ಕಿಕ್ಕೇರಿ	1	2	1					
4)	ಬೂಕಿನಕೆರೆ	1	5	—	1	1	1	1	
5)	ಬಂಡಿಹೊಳೆ	1	2	1	1	1	1	1	3
6)	ಸಿಂಧಘಟ್ಟ		1						
7)	ಮಾಕವಳ್ಳಿ		2			1			
	ಒಟ್ಟು	**21**	**95**	**14**	**16**	**56**	**39**	**27**	**67**

ವೈದ್ಯರ ಖಾಲಿ ಹುದ್ದೆಗಳ ವಿವರ

1)	ನಾಗಮಂಗಲ	1	13)	ರಾಕುನಿಕೇಮಳವಳ್ಳಿ	1
2)	ಕೆ.ಆರ್ ಪೇಟೆ	1	14)	ಬಂಡಿಹೊಳೆ	1
3)	ಮಳವಳ್ಳಿ	2	15)	ಗಂಜೀಗೆರೆ	1
4)	ಶ್ರೀರಂಗಪಟ್ಟಣ	2	16)	ಸೋಮನಹಳ್ಳಿ	1
5)	ಪಾಂಡಪುರ	1	17)	ಅಗಾಲಯ	1
6)	ಕೆಸ್ತೂರು	1	18)	ಮಡುವಿನಕೋಡಿ	1
7)	ಕೊತ್ತತ್ತಿ	1	19)	ಆನೇಗೋಲ	1
8)	ಹರದನಹಳ್ಳಿ	2	20)	ಬಳ್ಳೇಕೆರೆ	1
9)	ದೇವಲಾಪುರ	1	21)	ಸಾರಂಗಿ	1
10)	ಚಿಣ್ಯ	1	22)	ಪೂರಿಗಾಲಿ	1
11)	ಯತ್ತಂಬಾಡಿ	1	23)	ಬೋಗಾಧಿ	1
12)	ನಿಟ್ಟೂರು	1			26

ಕೊರತೆ ಸುಮಾರು 41 ಎಂದು ತಾವು ಕೊಟ್ಟಿರತಕ್ಕ ಅಂಕಿ ಅಂಶದ ಆಧಾರದ ಪ್ರಕಾರ. ಇಡೀ ಜಿಲ್ಲೆಯಲ್ಲಿ ಸುಮಾರು 26 ಮಂದಿ ಡಾಕ್ಟರ್‌ಗಳ ಕೊರತೆ. ತಾವು ಹುಟ್ಟಿ ಬಂದಿದ್ದು 100ಕ್ಕೆ 100 ಗ್ರಾಮೀಣ ಪ್ರದೇಶದಿಂದ ಎಂದು ನನಗೆ ಗೊತ್ತು. ಸನ್ಮಾನ್ಯ ಉಪಾಧ್ಯಕ್ಷರು ಪ್ರತಿನಿಧಿಸತಕ್ಕದ್ದು ಗ್ರಾಮೀಣ ಪ್ರದೇಶ. ಇವತ್ತು ನಮ್ಮ ಹಳ್ಳಿಗಳಲ್ಲಿ ವಾಸ ಮಾಡತಕ್ಕ ಜನರ ಹಣೇಬರಹ ಇಷ್ಟೇನೇ ಎನ್ನತಕ್ಕದ್ದು. ಏಕೆಂದರೆ ಮೇಸ್ಟರುಗಳು ಹೋಗುವುದಿಲ್ಲ. ಡಾಕ್ಟರುಗಳು ಹೋಗುವುದಿಲ್ಲ ಕಾಂಪೌಂಡರುಗಳು ಹೋಗುವುದಿಲ್ಲ. ಏನು ಉತ್ತರ ಕೊಟ್ಟಿದ್ದೀರಿ ಅದಕ್ಕೆ ತಕ್ಕಂತೆ ನಿಮ್ಮಿಂದ ನಾನು ನಿರೀಕ್ಷಿಸುವುದು ಏನೆಂದರೆ ಈಗ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ತಾವು ವೈದ್ಯರ ಕೊರತೆಯನ್ನು ತುಂಬಲಿಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಒಂದು ಪಿಎಸ್‌ಸಿಯಿಂದ ತೆಗೆದುಕೊಳ್ಳತಕ್ಕದ್ದು ಮತ್ತು ಇನ್ನೊಂದು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳತಕ್ಕದ್ದು ಅದನ್ನು ಮಾಡತಕ್ಕದ್ದು ಒಂದು. ನಂತರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಇವರುಗಳು ರಿಜಿಸ್ಟರ್ ಸೈನ್ ಹಾಕುವುದಕ್ಕೆ ಮಾತ್ರ ಇದ್ದಾರೆ. ಬಹುತೇಕ ರಜನ, ಒಳ್ಳೆಯ ಡಾಕ್ಟರುಗಳೂ ಇದ್ದಾರೆ.ಗೌರವದಿಂದ ಹೇಳುತ್ತೇನೆ. ಅಲ್ಲಿ ಏನಾಗಿದೆ ಕೇಂದ್ರಗಳಲ್ಲಿ ಅಂದರೆ ಸೈನ್ ಹಾಕಿ ಒಂದರ್ಧ ಗಂಟೆ ಇದ್ದು ಬಂದು ಪಟ್ಟಣಗಳಲ್ಲಿ, ನಗರಪ್ರದೇಶಗಳಲ್ಲಿ, ನರ್ಸಿಂಗ್ ಹೋಂಗಳಲ್ಲಿಯಾಕೆ ಟೀಕೆ ಮಾಡುತ್ತಾರೆ. ತಾವು ಹಿಂದೆ ಹೇಳಿದ್ದೀರಿ, ನಾನು ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳುತ್ತೇನೆ ಎಂದು.

ಉಪಾಧ್ಯಕ್ಷರು : ಶಿವಕುಮಾರ್‌ರವರೇ ಪ್ರಶ್ನೆ ಬರಲಿ.

ಶ್ರೀ ಜಿ.ಬಿ. ಶಿವಕುಮಾರ್ : ಅದಕ್ಕೇ ನಾನು ಅವರಿಂದ ಸ್ಪಷ್ಟವಾದ ಉತ್ತರವನ್ನು ನಿರೀಕ್ಷಿಸುತ್ತೇನೆ. ನಾವು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತೇವೆಂದು. ಆಸ್ಪತ್ರೆಯಲ್ಲಿ ಕೆಲಸದ ವೇಳೆ ಎಂದೇನು ಇದೆ ಅಲ್ಲಿ ಪೂರ್ತಿ ಕೆಲಸ ಮಾಡತಕ್ಕದ್ದಕ್ಕೆ ಕಟ್ಟು ನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ಮತ್ತೊಂದು ಸುಮಾರು 40-50 ಸಣ್ಣಪುಟ್ಟ ಗ್ರಾಮ ಸೇರತಕ್ಕ ಕೇಂದ್ರಗಳಲ್ಲಿ ಅವರು ವಾಸ ಮಾಡಬೇಕಾದರೆ ಡಾಕ್ಟರ್‌ಗಳು ಆಗಲಿ ಸಿಬ್ಬಂದಿಗಳಾಗಲೀ ನಾವು ಆಕ್ಷೇಪಣೆ ಮಾಡುವ ಅಲ್ಲಿ ವಸತಿ ಗೃಹಗಳು ಇಲ್ಲ. ಬಾಡಿಗೆ ಮನೆ ಆಗುವುದಿಲ್ಲ. ಸರ್ಕಾರದ ಕಾರ್ಯಕ್ರಮದ ಜೊತೆಗೆ ಅಲ್ಲಿ ಯಾವುದು ಇಂಟೀರಿಯರ್ ವಿಲೇಜಸ್ ಇದೆ ಅಲ್ಲಿ ವಸತಿ ಗೃಹಗಳನ್ನು ಕಟ್ಟಿಸತಕ್ಕ ಒಂದು ಯೋಜನೆಯನ್ನು ಕೂಡ ಸರ್ಕಾರ ರೂಪಿಸಿಕೊಳ್ಳಬೇಕು. ವಾಹನಗಳನ್ನು ಕೂಡ ಅವರಿಗೆ ಪ್ರೊವೈಡ್ ಮಾಡಬೇಕು. ಮೊನ್ನೆ ಒಂದು ಘಟನೆ ಆಗಿದೆ ಉಪಾಧ್ಯಕ್ಷರೇ, ಏನೋ ಲೇಬರ್ ಪೈನ್ ಬಂದು ಹೆಣ್ಣು ಮಗಳನ್ನು ತೆಗೆದುಕೊಂಡು ಬರತಕ್ಕ್ ಟ್ರಾಕ್ಟರ್‌ನಲ್ಲಿ ಮಂಡ್ಯಕ್ಕೆ ಬರುವುದರಲ್ಲಿ ಪ್ರಾಣ ಹೋಗಿದೆ. ಇದು ನನ್ನ ಕ್ಷೇತ್ರದಲ್ಲಿ ಆಗಿರತಕ್ಕದ್ದು. ಇದರ ಸಮಸ್ಯೆಯ ತೀವ್ರತೆ ತಮಗೂ ಗೊತ್ತಿದೆ. ಮಾನ್ಯ ಆರೋಗ್ಯ ಸಚಿವರು ಇದಕ್ಕೆ ಒಂದು ಸವಿಸ್ತಾರವಾದಂತಹ ಉತ್ತರವನ್ನು ಒಂದು ಕಾರ್ಯಕ್ರಮದ ರೂಪದಲ್ಲಿ ಕೊಡಬೇಕು ಎನ್ನತಕ್ಕದ್ದನ್ನು ಅವರಿಂದ ನಾನು ನಿರೀಕ್ಷಿಸುತ್ತೇನೆ. ವಾಹನಗಳನ್ನು ಅಂತೂ ಪ್ರತಿ ಆರೋಗ್ಯ ಕೇಂದ್ರಕ್ಕೆ ಕೊಟ್ಟರೆ ಸುತ್ತ ಮುತ್ತ ಬರತಕ್ಕ ಮಲೇರಿಯಾ, ಮೆದುಳು ಜ್ವರ ಬಂದ ತಕ್ಷಣ ಆಸ್ಪತ್ರೆಗೆ ಸೇರಿಸಬಹುದು. ನಾಲ್ಕು ಜನ ಸತ್ತ ಮೇಲೆ ನಮ್ಮ ಹಳ್ಳಿಯಲ್ಲಿ ಡಾಕ್ಟರುಗಳು ಹೋಗತಕ್ಕ ಪರಿಸ್ಥಿತಿ ಬಂದಿದೆ. ಅದರ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಅವರಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀಮತಿ ವಿಜಯಲಕ್ಷ್ಮಿ ಬಂಡೀಸಿದ್ದೇಗೌಡ : ನಾನು ಒಂದೆರಡು ನಿಮಿಷ ಮಾತನಾಡಬೇಕು ನನ್ನ ಕ್ಷೇತ್ರ ವಿಧಾನಸಭಾ ಶ್ರೀರಂಗಪಟ್ಟಣ ಆದರೂ ಕೂಡ ಬಹಳಷ್ಟು ಜನ ವೈದ್ಯರುಗಳ ಕೊರತೆ ಮತ್ತು ಎ.ಎನ್.ಎಂ.ಎಸ್.ಗಳ ಕೊರತೆ ಇದೆ. ಮತ್ತೆ ಇದರಲ್ಲಿ ನನ್ನ ಕ್ಷೇತ್ರದಲ್ಲಿ 10-12 ಜನ ಎ.ಎನ್.ಎಂ.ಎಸ್.ಗಳನ್ನು ಟ್ರಾನ್ಸ್‌ಫರ್ ಮಾಡಿದ್ದಾರೆ, ಯಾರನ್ನಾದರೂ ಟ್ರಾನ್ಸ್‌ಫರ್ ಮಾಡಲಿ, ಆದರೆ ಅಲ್ಲಿ ಸೂಕ್ತವಾದ ಅಭ್ಯರ್ಥಿಯನ್ನು ಹಾಕಬೇಕು. ಮತ್ತೆ ಅಲ್ಲಿ ಏನು ಆಗಿದೆ ಎಂದರೆ ನಾನೂ ಒಬ್ಬ ಲೇಡಿ ಎಂ.ಎಲ್.ಎ. ಆಗಿರುವುದರಿಂದ ನಾವು ಅಲ್ಲೇ ಇದ್ದರೆ ಯಾವುದಾದರೂ ಒಂದು ತೆರಿಗೆ ಕೇಸ್ ಬಂದರೆ ಅಲ್ಲೇ ಮಾಡಿಕೊಳ್ಳಬಹುದು, ಆದರೆ ಮಂಡ್ಯ ಮೈಸೂರು ಕಡೆ ಹೋದರೆ ನಮಗೆ ಎರಡು ಸಾವಿರ ರೂಪಾಯಿ ಆದರೂ ಸಾಲುವುದಿಲ್ಲ. ನಾವುಎಲ್ಲಾ ಗ್ರಾಮಕ್ಕೂ ಆಸ್ಪತ್ರೆಗಳನ್ನು ಕೊಡಲು ಆಗುವುದಿಲ್ಲ, ಆದರೂ ಕೂಡ ಎಎನ್‌ಎಂಎಸ್ ಗಳನ್ನು ನನ್ನ ಒಂದೇ ಕ್ಷೇತ್ರದಲ್ಲಿ ಅಲ್ಲ ಎಲ್ಲಾ ಕ್ಷೇತ್ರದಲ್ಲಿ ಕೂಡ ಫಿಲಪ್ ಮಾಡಬೇಕು. ಅಕಸ್ಮಾತ್ ಸಿಗದೇ ಇದ್ದರೆ ನೀವು ಇಂಟರವ್ಯೂ ಕರೆದೋ ಅಥವಾ ಬೇರೆ ತರಹದಿಂದ ಮಾಡಿ ಸಿಬ್ಬಂದಿ ಕೊರತೆ ಯನ್ನು ನೀಗಿಸಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಅದೇ ರೀತಿ ಜೀಪ್ ವ್ಯವಸ್ಥೆ ಕೂಡ ಬಹಳ ಕೆಟ್ಟಿದೆ. ಕೆಲವೊಂದು ಸಾರಿ ತಳ್ಳಿಕೊಂಡು ಹೋಗಬೇಕಾಗುತ್ತದೆ, ಅದಕ್ಕೆ ಬ್ಯಾಟರಿ ಇರುವುದಿಲ್ಲ. ಟೈರ್ ಇರುವುದಿಲ್ಲ. ದಯಮಾಡಿ ಎಲ್ಲಾ ಆರೋಗ್ಯ ಘಟಕಕ್ಕೆ ಹೊಸ ಜೀಪ್‌ಗಳನ್ನು ವ್ಯವಸ್ಥೆ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ಒಂದೇ ಒಂದು ಪ್ರಶ್ನೆ. ಕಂಟ್ರಾಕ್ಟ್ ಬೇಸಿನ್ ಮೇಲೆ ನೇಮಕ ಮಾಡಿದ ಮೇಲೆ ವರ್ಗಾವಣೆ ಮಾಡಿದ್ದೀರಿ. ಇದರ ಬಗ್ಗೆ ಸ್ವಲ್ಪ ಸವಿಸ್ತಾರವಾಗಿ ಹೇಳಬೇಕು.

ಶ್ರೀ ಎ. ರಾಮದಾಸ್ : ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಕೊಟ್ಟಂತಹ ಉತ್ತರದಲ್ಲಿ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಲಾಗಿದ್ದಕ್ಕೆ ಬಂದಿದೆ ಎಂದು ಉತ್ತರದಲ್ಲಿದೆ. ಕ್ರಮ ಏನು ತೆಗೆದುಕೊಂಡಿದ್ದೀರಿ ಎಂದು ಕೇಳಿದಾಗ ಆರ್ಥಿಕ ನಿಬಂಧನೆ ತೆರವಿಗಾಗಿ ಕಾಯುತ್ತಿದ್ದೇವೆ ಎಂದು ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆದರೆ ನಾಲ್ಕು ತಿಂಗಳ ವಿದೆ ನಮ್ಮ ಮಾನ್ಯ ಸಭಾನಾಯಕರು, ಮುಖ್ಯಮಂತ್ರಿಗಳು ಒಂದು ವಿಚಾರವನ್ನು ಹೇಳಿದರು ಯಾವ ಆರೋಗ್ಯ ಶಿಕ್ಷಣ, ವಿದ್ಯುತ್ ಮತ್ತು ನೀರಾವರಿ ಕ್ಷೇತ್ರಗಳಿಗೆ ನೇಮಕ ಮಾಡಲಿಕ್ಕೋಸ್ಕರವಾಗಿ ಯಾವುದೇ ಆರ್ಥಿಕ ನಿಬಂಧನೆ ಇಲ್ಲ, ಅದನ್ನು ತೆಗೆದುಹಾಕಿದ್ದೇವೆ ಎಂದು ಹೇಳಿದ್ದಾರೆ. ನೇಮಕಾತಿಗೆ ಅವಕಾಶ ಮಾಡಿದ್ದೇವೆ ಎಂದಿದ್ದಾರೆ. ಆದರೆ ಆರೋಗ್ಯ ಇಲಾಖೆಯಲ್ಲಿ ನೇಮಕಾತಿಗೋಸ್ಕರವಾಗಿ ನಿರ್ಬಂಧ ಇನ್ನೂ ಇದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಒಂದು ಕಡೆ ತೆಗೆದು ಹಾಕಿದ್ದೇವೆ ಎಂದು ಹೇಳಿ ಒಂದು ಕಡೆ ನಿರ್ಬಂಧನೆ ಎಂದು ಇದೆ, ಇದರಲ್ಲಿ ಯಾವುದು ಸತ್ಯ ಯಾವುದು ಸತ್ಯಕ್ಕೆ ದೂರವಾದುದು ಎಂಬುದು ವಿಚಾರ. ಎರಡನೆಯದು ಇಲ್ಲಿ ಔಷಧಿಗಳ ಸರಬರಾಜಿನಲ್ಲಿ ನ್ಯೂನತೆಯು ಇದೆಯೇ ಎಂದರೆ ನ್ಯೂನತೆ ಇದೆ ಎಂದು ಅವರು ಒಪ್ಪಿಕೊಂಡಿದ್ದಾರೆ. ಔಷಧಿಗಳನ್ನು ವಾರ್ಷಿಕ ಅನುದಾನದಲ್ಲಿ ಪೂರೈಸಲಾಗುತ್ತಿದೆ ಎಂದು ಹೇಳಿದ್ದೀರಿ ಆದರೆ ಆರೋಗ್ಯ ಇಲಾಖೆಯಲ್ಲಿ ಔಷಧ ಅವಶ್ಯಕತೆ ಆಧಾರದ ಮೇಲೆ ಸಪ್ಲೈ

ಕೊಡಬೇಕೇ ಹೊರತು ಬೇರೆ ಆಧಾರದ ಮೇಲೆ ಅಲ್ಲ ಒಂದೊಂದು ಯೂನಿಟ್‌ನಲ್ಲಿ ಸುಮಾರು 100-150 ಜನ ಪೇಷಂಟ್ಸ್ ಬರುವಂತಹದು ಇದೆ. ಆದರೆ ಕೇವಲ ಹತ್ತ ಜನ ಬರುವಂತಹದೂ ಇದ್ದರೂ ಕೂಡ ಕೇವಲ 30 ಸಾವಿರ ರೂಪಾಯಿಯ ಒಂದ ಕಿಟ್ ಒಂದು ತಿಂಗಳಿಗೆ ಕೊಡುತ್ತಿದ್ದಾರೆ. ಒಂದು ಲಕ್ಷ ರೂಪಾಯಿ ಅವಶ್ಯಕತೆ ಇರುವ ಕಡೆ ಕೂಡ 30 ಸಾವಿರ ರೂಪಾಯಿ ಕಿಟ್ ಕೊಡುತ್ತಿದ್ದಾರೆ. ಕೇವಲ ಐದು ಸಾವಿರ ರೂಪಾಯಿ ಮೆಡಿಸಿನ್ ಖರ್ಚಾಗುವ ಕಡೆ ಕೂಡ 30 ಸಾವಿರ ರೂಪಾಯಿ ಕಿಟ್ ಅವಶ್ಯಕತೆ ಏನು ಇದೆ ? ಇದಕ್ಕೆ ದಯವಿಟ್ಟು ಮಂತ್ರಿಗಳು ಅದರ ಬಗ್ಗೆ ಉತ್ತರ ಹೇಳಬೇಕು.

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಈಗ ಬಹಳಷ್ಟು ಕಡೆ ವೈದ್ಯರು ಇಲ್ಲ. ವೈದ್ಯರು ಇದ್ದರೂ ಕೂಡ ಸಿಬ್ಬಂದಿ ಇಲ್ಲದೆ ವೈದ್ಯರೇ ಜವಾನರ ಕೆಲಸವನ್ನೂ ಮಾಡುತ್ತಿದ್ದಾರೆ. ಮಾನ್ಯ ಸಚಿವರಿಗೆ ಕೂಡ ಸುಮಾರು ಆರು ತಿಂಗಳಿಂದ ಅವರಿಗೆ ಹೇಳುವುದು ಅಭ್ಯಾಸ ಆಗಿ ಹೋಗಿ ಬಿಟ್ಟಿದೆ. ನಾವು ನಾಳೆ ಮಾಡುತ್ತೇವೆ ನಾಡಿದ್ದು ಮಾಡುತ್ತೇವೆ ಶೀಘ್ರದಲ್ಲಿ ಮಾಡುತ್ತೇವೆ ಎಂದು ಹೇಳುವ ಅಭ್ಯಾಸ ಆಗಿ ಹೋಗಿದೆ. ಹಾಸನ ಜಿಲ್ಲೆಯಲ್ಲಿ ಸುಮಾರು 380 ಪೋಸ್ಟ್ ಎ.ಎನ್.ಎಂ.ಗಳು ಇರಬಹುದು, ಜವಾನರು ಇರಬಹುದು ಖಾಲಿ ಇದ್ದಾರೆ ರಾಜ್ಯದಲ್ಲಿ ಎಂಟರಿಂದ ಹತ್ತು ಸಾವಿರ ಪೋಸ್ಟ್‌ಗಳು ಖಾಲಿ ಇದ್ದಾವೆ. ಆ ಹುದ್ದೆಗಳನ್ನು ತುಂಬುವುದಕ್ಕೆ ತಾವು ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ ? ಒಂದೆರಡು ತಿಂಗಳುಗಳಲ್ಲಿ ತುಂಬುತ್ತೇವೆಂದು ಹೇಳುವ ಪ್ರತಿಕ್ರಿಯೆ ಬಿಟ್ಟುಬಿಡಿ . ನಿಜವಾಗಿಯೂ ಏನಾದರೂ ಕಷ್ಟವಿದ್ದರೆ ಸರ್ಕಾರಕ್ಕೆ ಇಂತಹ ಕಷ್ಟವಿದೆಯೆಂದು ಹೇಳಿ. ಇದರ ಬಗ್ಗೆ ತಾವು ನಿರ್ದಿಷ್ಟವಾಗಿ ಹೇಳಿದರೆ ನಾವು ಮತ್ತೆ ಪ್ರಶ್ನೆ ಕೇಳುವುದು ತಪ್ಪುತ್ತದೆ. ಅದಕ್ಕೆ ನೀವು ಉತ್ತರಿಸುವುದೂ ತಪ್ಪುತ್ತದೆ.

ಶ್ರೀ ಗಂಗಹನುಮಯ್ಯ : ಉಪಾಧ್ಯಕ್ಷರೇ ನನ್ನ ಕ್ಷೇತ್ರವಾದ ಮಧುಗಿರಿಯಲ್ಲಿ ಕಾಲರಾ ರೋಗ ಉದ್ಭವಿಸಿದೆ. ಅಲ್ಲಿ ವೈದ್ಯರ ಕೊರತೆಯಿರುವುದರಿಂದ ವೈದ್ಯರ ನೇಮಕ ಮಾಡಬೇಕೆಂದು ಬಹಳ ಸಲ ಮನವಿ ಮಾಡಿದ್ದರೂ ಇದುವರೆವಿಗೂ ಒಬ್ಬ ವೈದ್ಯರ ನೇಮಕ ಮಾಡಬೇಕೆಂದು ಬಹಳ ಸಲ ಮನವಿ ಮಾಡಿದ್ದರೂ ಇದುವರೆವಿಗೂ ಒಬ್ಬ ವೈದ್ಯರನ್ನೂ ನೇಮಿಸಿಲ್ಲ. ದಯಮಾಡಿ ಈಗಲಾದರೂ ವೈದ್ಯರನ್ನು ನೇಮಿಸಲು ಸರ್ಕಾರದವರು ಪ್ರಯತ್ನ ಮಾಡುತ್ತಾರೆಂದು ಆಶಿಸುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಉಪಾಧ್ಯಕ್ಷರೇ ವೈದ್ಯಕೀಯ ಸೌಲಭ್ಯದಲ್ಲಿ ಅತಿ ಮುಖ್ಯವಾದುದು ಸಂಚಾರಿ ವಾಹನದ ಮೂಲಕ ವೈದ್ಯರ ಸೇವೆಯನ್ನು ಹಳ್ಳಿಯ ಜನರಿಗೆ ಒದಗಿಸುವುದು ಬಹಳ ಅವಶ್ಯಕತೆಯಾಗಿದೆ. ಇವೊತ್ತು ನಾವು ಬರಗಾಲ ಪರಿಸ್ಥಿತಿ ಬಗ್ಗೆ ಬಹಳ ಗಂಭೀರವಾಗಿ ಮಾತನಾಡುತ್ತೇವೆ. ಆದರೆ, ಬರಗಾಲಕ್ಕೆ ಸಿಕ್ಕಿರುವ ರೈತರಿಗೆ ವೈದ್ಯಕೀಯ ಶುಶ್ರೂಷೆಯನ್ನು ನಾವು ಎಷ್ಟರಮಟ್ಟಿಗೆ ಕೊಡುತ್ತಿದ್ದೇವೆಂದು ಆಲೋಚಿಸಬೇಕು. ಆದುದರಿಂದ,. ಈ ದಿಶೆಯಲ್ಲಿ ಸಂಚಾರಿ ಆಸ್ಪತ್ರೆ ಸೌಲಭ್ಯ ಕಲ್ಪಿಸಿಕೊಡುವ ಬಗ್ಗೆ ತಾವು ಗಂಭೀರವಾಗಿ ಯೋಚಿಸಬೇಕು ಹಾಗೂ ಇನ್ನು ಅತಿ ಮುಖ್ಯವಾದುದು ಗುತ್ತಿಗೆ ಆಧಾರದ ಮೇಲೆ ವೈದ್ಯರುಗಳನ್ನು ಎಷ್ಟು ತಿಂಗಳೊಳಗಾಗಿ ತುಂಬುತ್ತೀರಿ ಎಂಬುದನ್ನು ಈ ಸದನದಲ್ಲಿ ಹೇಳಬೇಕೆಂದು ನಾನು ಮಾನ್ಯ ಉಪಾಧ್ಯಕ್ಷರ ಮೂಲಕ ತಮ್ಮ ಗಮನ ಸೆಳೆಯುತ್ತಾ ಮನವಿ ಮಾಡಿಕೊಳ್ಳುತ್ತೇನೆ.

ಡಾ|| ಹೆಚ್.ಸಿ. ಮಹದೇವಪ್ಪ : ಮಾನ್ಯ ಉಪಾಧ್ಯಕ್ಷರೇ, ಈ ವಿಷಯದ ಬಗೆಗಿನ ಅನೇಕ ಮಾನ್ಯ ಸದಸ್ಯರ ತೀವ್ರತೆ ಹಾಗೂ ಕಾಳಜಿ ಸರ್ಕಾರದ ಗಮನಕ್ಕೆ ಬಂದಿದೆ. ಕಳೆದ ಹತ್ತು ವರ್ಷಗಳಿಂದ 1986 ರಿಂದ ಇಲ್ಲಿಯ ತನಕ ಅನೇಕ ಇಲಾಖೆಗಳಲ್ಲಿ ಯಾವುದೇ ನೇಮಕಾತಿಯಾಗಿಲ್ಲ. ಆದರೆ, ನಮ್ಮ ಸರ್ಕಾರ ಬಂದ ನಂತರ ಗೃಹ ಶಿಕ್ಷಣ ಮತ್ತು ಆರೋಗ್ಯ ಇಲಾಖೆಗಳಲ್ಲಿ ಅಗತ್ಯವಿರುವ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲು ಅನುಮತಿಯನ್ನು ಪಡೆದುಕೊಳ್ಳಲಾಗಿದೆ. ಶೇಕಡ 68ರಷ್ಟು ಮೀಸಲಾತಿ ಇದ್ದಂಥ ಸಂದರ್ಭದಲ್ಲಿ ಅರ್ಜಿಗಳನ್ನು ಕರೆದಿರತಕ್ಕ ಒಂದು ಸನ್ನಿವೇಶ ಮತ್ತು ಸುಪ್ರೀಂ ಕೋರ್ಟ ಆದೇಶದ ಪ್ರಕಾರ ಶೇಕಡ 50 ರಷ್ಟು ಮೀಸಲಾತಿಯಂತೆ ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ಸಿಬ್ಬಂದಿಗಳ ಆಯ್ಕೆಯಲ್ಲಿ ಸ್ವಲ್ಪ ವಿಳಂಬ ಆಗಿದೆ. ಈಗ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಾವು ಸ್ಪಷ್ಟೀಕರಣ ಕೇಳಿದ್ದೇವೆ ಇನ್ನು 15-20 ದಿವಸಗಳಲ್ಲಿ ಅವರು ಸ್ಪಷ್ಟೀಕರಣ ಕೊಡಬೇಕು. ಅಲ್ಲದೆ ನಾನೇ ಖುದ್ದಾಗಿ ಇಲಾಖಾ ಕಾರ್ಯದರ್ಶಿಯವರೊಡನೆ ಮಾತನಾಡಿದ್ದು ಅವರಿಂದ ಸ್ಪಷ್ಟೀಕರಣ ಬಂದ ತಕ್ಷಣ

ಶ್ರೀ ಕಾಗೋಡು ತಿಮ್ಮಪ್ಪ : ಈ ವಿಚಾರದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಸ್ಪಷ್ಟೀಕರಣ ಕೇಳುವಂಥ ಸಂದರ್ಭವೇ ಇಲ್ಲ. ಏಕೆಂದರೆ ಸುಪ್ರೀಂ ಕೋರ್ಟಿನ ತೀರ್ಮಾನದ ಹಿನ್ನಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆ ಶೇಕಡ 50ಕ್ಕೂ ಮೀರದ ರೀತಿಯಲ್ಲಿ ಮೀಸಲಾತಿ ನೀಡುವುದಕ್ಕೆ ಆಜ್ಞೆ ಹೊರಡಿಸಿದೆ. ಆದರೆ, ತಡವಾಗಿರುವುದು ಎಲ್ಲೆಂದರೆ, ಡಿ.ಪಿ.ಎ.ಆರ್‌ನಲ್ಲಿ ರೋಸ್ಟರ ಅನ್ನು ಇನ್ನೂ ಅಂತಿಮಗೊಳಿಸಿಲ್ಲ.

ಡಾ|| ಹೆಚ್.ಸಿ. ಮಹದೇವಪ್ಪ : ಆಜ್ಞೆ ಬಂದಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಆಜ್ಞೆ ಬಂದ ಮೇಲೆ ಮತ್ತೆ ಸ್ಪಷ್ಟೀಕರಣ ಕೇಳುವ ಪ್ರಶ್ನೆಯೇ ಇಲ್ಲ. ಅದನ್ನು ಮತ್ತೆ ತಾವೇನಾದರೂ ಪರೀಷ್ಕೃತ ಗೊಳಿಸುತ್ತೀರಾ?

ಡಾ|| ಹೆಚ್.ಸಿ. ಮಹದೇವಪ್ಪ : ಆದರೆ, ಎ,ಬಿ, ಸಿ ಕ್ಯಾಟಗಿರಿಯಲ್ಲಿ ಯಾವ ರೀತಿ ಮೀಸಲಾತಿ ನೀಡಬೇಕೆಂದು ಅವರು ಸ್ಪಷ್ಟೀಕರಣ ಕೊಡಬೇಕು. ಅದಕ್ಕಾಗಿಯೇ ಸಚಿವ ಸಂಪುಟದ ಉಪಸಮಿತಿ ರಚಿಸಲಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಶೇಕಡ 50 ಕ್ಕಿಂತ ಜಾಸ್ತಿ ಮೀಸಲಾತಿ ನೀಡಬಾರದೆಂದು ಪರಿಷ್ಕೃತ ಆದೇಶ ಏನು ಹೊರಡಿಸಲಾಗಿತ್ತು, ಅದನ್ನು ತಾವು ಪರಿಷ್ಕೃತಗೊಳಿಸಿಲ್ಲ, ಅದು ಯಥಾವತ್ತಾಗಿದೆ, ಇದಾದ ನಂತರವೂ ಪುನಃ ಅವರಿಂದ ಸ್ಪಷ್ಟೀಕರಣ ಕೇಳುವಂಥ ಪ್ರಶ್ನೆ ಏನು?

ಡಾ|| ಹೆಚ್.ಸಿ. ಮಹದೇವಪ್ಪ : ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೋಸ್ಕರ ಸಚಿವ ಸಂಪುಟದ ಉಪಸಮಿತಿಯನ್ನು ಕೂಡ ರಚಿಸಲಾಗಿದ್ದು, ತಕ್ಷಣದಲ್ಲೀಯೇ ನೇಮಕಾತಿ ಮಾಡಿಕೊಳ್ಳಲು ಕ್ರಮ ತೆಗೆದುಕೊಂಡಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಶೇಕಡ 50ರಷ್ಟಕ್ಕೆ ಮಾತ್ರ ಡಿ.ಪಿ.ಎ.ಆರ್‌ನವರು ರೋಸ್ಟರ್ ಮಾಡಿಕೊಡಬೇಕು ಅವರು ಮಾಡಿಕೊಡುವುದರಿಂದ ಇದು ತಡವಾಗಿದೆ.

ಡಾ|| ಹೆಚ್.ಸಿ. ಮಹದೇವಪ್ಪ : ಆದುದರಿಂದ, ನಾವು ಇಲಾಖೆಯಿಂದ ಸ್ಪಷ್ಟೀಕರಣ ಪಡೆದುಕೊಂಡ ತಕ್ಷಣ ಲೋಕಸೇವಾ ಆಯೋಗದಿಂದ 400 ವೈದ್ಯರುಗಳನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಉಪಾಧ್ಯಕ್ಷರೇ, ಹತ್ತು ವರ್ಷಗಳಿಂದ ನಾವು ಯಾವುದೇ ಸಂದರ್ಶನ ನಡೆಸಿಲ್ಲ. ಹತ್ತು ವರ್ಷಗಳಿಂದ ವೈದ್ಯಕೀಯ ಸೌಲಭ್ಯಗಳನ್ನು ಕಲ್ಪಿಸಿಕೊಡುವ ಬಗ್ಗೆ ಹಾಗೂ ವೈದ್ಯರ ನೇಮಕಾತಿ ಮಾಡುವ ಕುರಿತು ಹಿಂದಿನ ಸರ್ಕಾರವಿದ್ದಾಗ ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ನೇಮಕಾತಿ ಮಾಡಿಕೊಳ್ಳಬೇಕೆಂದು ಆದೇಶ ಹೊರಡಿಸಿದ್ದು, ಅದರಂತೆ ಅನೇಕ ವೈದ್ಯರುಗಳನ್ನು ನೇಮಿಸಲಾಯಿತು. ಈಗ (ಜನತಾ ದಳ) ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ನೇಮಿಸುವ ಬಗ್ಗೆ ಜಿಲ್ಲಾಧಿಕಾರಿಗಳ ಕಛೇರಿಗೆ ಆದೇಶ ಹೊರಡಿಸಿದ್ದಾರೆ. ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಯಾವ್ಯಾವ ವೈದ್ಯರುಗಳು ಕೆಲಸ ನಿರೀಕ್ಷಿಸುತ್ತಾರೋ ಅವರುಗಳು ಅಲ್ಲಿಯೇ ತಮ್ಮ ಅರ್ಜಿಗಳನ್ನು ಕೊಡುವುದಕ್ಕೆ ಸೂಚನೆಗಳನ್ನು ಕೊಟ್ಟಿದ್ದಾರೆ. ಈ ರಾಜ್ಯದಲ್ಲಿರುವ ಎಲ್ಲಾ ಜಿಲ್ಲಾಧಿಕಾರಿಗಳ ಕಛೇರಿಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ನಿರೀಕ್ಷಿಸಿ ಎಷ್ಟು ವೈದ್ಯರು ಅರ್ಜಿಗಳನ್ನು ಸಲ್ಲಿಸಿದ್ದಾರೆಂದು ಸಚಿವರು ಹೇಳಿದರೆ ಅನಂತರ ನೇಮಕಾತಿ ಮೀಸಲಾತಿ ಮುಂತಾದ ವಿಷಯಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ವಿರುತ್ತದೆ. ಇದರ ಬಗ್ಗೆ ಸಚಿವರು ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು : ಸನ್ಮಾನ್ಯ ಸದಸ್ಯರು ಒಂದು ವಿಷಯ ಅರ್ಥಮಾಡಿಕೊಳ್ಳಬೇಕು. ಏನೆಂದರೆ, ಪ್ರಶ್ನೆಯ ಗಂಭೀರತೆ ಅರಿತುಕೊಂಡು ಸದಸ್ಯರಿಗೆ ಮಾತನಾಡಲು ಸಾಕಷ್ಟು ಅವಕಾಶ ಕಲ್ಪಿಸಿಕೊಡುತ್ತಿದ್ದೇನೆ. ಸದಸ್ಯರು ಇದನ್ನು ದುರುಪಯೋಗಪಡಿಸಿಕೊಳ್ಳಬಾರದು.

ಡಾ|| ಹೆಚ್.ಸಿ. ಮಹದೇವಪ್ಪ : ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಈಗಾಗಲೇ ಹೇಳಿರುವಂತೆ, ಎಲ್ಲೆಲ್ಲಿ ವೈದ್ಯರ ಹುದ್ದೆಗಳು ಖಾಲಿ ಇವೆ, ಅಲ್ಲಿ ಸರ್ಕಾರವೇ ತುಂಬುವಂಥ ಪರಿಪಾಠವಿತ್ತು. ಆದರೆ, ಖಾಲಿ ಇರುವ ಹುದ್ದೆಗಳನ್ನು ತ್ವರಿತವಾಗಿ ತುಂಬುವುದಕ್ಕೆ ಅನುಕೂಲವಾಗುವ ರೀತಿ ಜಿಲ್ಲಾಧಿಕಾರಿಗಳಿಗೆ ಆಯಾ ಜಿಲ್ಲೆಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ತುಂಬಲು ನೇರವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಸೂಚನೆ ಕೊಟ್ಟಿದ್ದೇವೆ. ಈ ದಿಸೆಯಲ್ಲಿ 2-3 ಜಿಲ್ಲೆಗಳಿಂದ ಈಗಾಗಲೇ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಪಟ್ಟಿ ಮಾಡಿದ್ದೇವೆ ಇನ್ನು ಸ್ವಲ್ಪ ದಿವಸಗಳಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ತುಂಬುವುದಕ್ಕೆ ಸರ್ಕಾರ ತೀವ್ರವಾದ ಕ್ರಮ ತೆಗೆದುಕೊಳ್ಳುತ್ತದೆ. ಇನ್ನೊಂದು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುವುದೇನೆಂದರೆ, ಪ್ರಪಂಚದ ಯಾವುದೇ ರಾಷ್ಟ್ರದಲ್ಲಿ ಕೂಡ ತನ್ನಲ್ಲಿರುವ ಎಲ್ಲಾ ಜನಸಂಖ್ಯೆಗೆ ಔಷಧಿಯನ್ನು ಸರಬರಾಜು ಮಾಡಲು ಸಾಧ್ಯವಾಗುವುದಿಲ್ಲ. ಏಕೆಂದರೆ, ಇದಕ್ಕೆ ನಿಗಧಿತವಾದ ಆಯ-ವ್ಯಯ ಇರುತ್ತದೆ, ಅದರ ವ್ಯಾಪ್ತಿಯಲ್ಲಿ ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಇಂತಿಷ್ಟು ಔಷಧಿಗಳನ್ನು ಕೊಡಬೇಕು, ಒಂದು ತಾಲ್ಲೂಕು ಮಟ್ಟದ ಆಸ್ಪತ್ರೆಗೆ ಇಂತಿಷ್ಟು ಪ್ರಮಾಣದಲ್ಲಿ ಔಷಧಿಗಳನ್ನು

ಸರಬರಾಜು ಮಾಡಲು ಹಣ ವ್ಯಯ ಮಾಡಬೇಕೆಂಬ ಕಾನೂನು ಚೌಕಟ್ಟಿನೊಳಗಡೆ ಕೆಲಸ ಮಾಡಬೇಕಾದ ಸಂದರ್ಭದಲ್ಲಿ ಇವೊತ್ತು ನಾಲ್ಕು ಮುಕ್ಕಾಲು ಕೋಟಿಯಷ್ಟು ಜನಸಂಖ್ಯೆಯಿರುವ ರಾಜ್ಯದ ಎಲ್ಲಾ ಜನರಿಗೂ ಕೂಡ ಔಷಧಿಯನ್ನು ಸರಬರಾಜು ಮಾಡಲು ಸಾಧ್ಯವಾಗುವುದಿಲ್ಲ. ಪ್ರಪಂಚದ ಯಾವುದೇ ರಾಷ್ಟ್ರದಲ್ಲೂ ಕೂಡ ಅಲ್ಲಿನ ಎಲ್ಲಾ ಜನರಿಗೂ ಔಷಧಿಗಳನ್ನು ಸಬರಾಜು ಮಾಡಲು ಸಾಧ್ಯವಾಗದಂಥ ಪರಿಸ್ಥಿತಿ ಇದೆ. ನಮ್ಮ ಆಯ-ವ್ಯಯದಲ್ಲಿ ಎಷ್ಟು ಹಣವನ್ನು ನಿಗಧಿಪಡಿಸಿಕೊಂಡಿರುತ್ತೇವೆಯೋ, ಅದರ ಪರಿಮಿತಿಯೊಳಗೆ ಬಡ ಜನತೆಗೆ ಅಗತ್ಯವಿರುವ ಔಷಧಿಗಳನ್ನು ಸರಬರಾಜು ಮಾಡುವುದಕ್ಕೆ ಸರ್ಕಾರ ಕಟ್ಟನಿಟ್ಟಿನ ಕ್ರಮ ಕೈಗೊಳ್ಳುತ್ತದೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರುಗಳಲ್ಲಿರುವ ಕಳಕಳಿಯನ್ನು ಅರ್ಥಮಾಡಿಕೊಂಡು ತೀವ್ರಗತಿಯಲ್ಲಿ ಸರ್ಕಾರ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತದೆಂಬ ಮಾತನ್ನು ನಾನು ತಮ್ಮ ಮೂಲಕ ಮಾನ್ಯ ಗೌರವಾನ್ವಿತ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಜಿ.ಬಿ. ಶಿವಕುಮಾರ್ : ನಾನು ಕೇಳಿರುವ ಪ್ರಶ್ನೆಯನ್ನು ಹೊರತುಪಡಿಸಿ, ಸಚಿವರು ಇಡೀ ರಾಜ್ಯಕ್ಕೆ ಸಂಬಂಧಿಸಿದ ವಿಚಾರವಾಗಿ ಉತ್ತರ ಕೊಟ್ಟಿದ್ದಾರೆ . ನಾನು ಕೇಳಿರುವುದೇನೆಂದರೆ, ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯರು ವಾಸಿಸಬೇಕಾದರೆ ಅವರಿಗೆ ಅಲ್ಲಿ ಕನಿಷ್ಠ ಒಂದು ವಸತಿ ಗೃಹದ ಸೌಲಭ್ಯ ಕಲ್ಪಿಸಿಕೊಡಬೇಕಾದದ್ದು ನಮ್ಮ ಕರ್ತವ್ಯ. ಅವರು ವೈದ್ಯರಾದ ನಂತರ ಅಲ್ಲಿ ಮನೆ ಇಲ್ಲದಿದ್ದರೆ ವಾಸಿಸುವುದಿಲ್ಲ, ಆದುದರಿಂದ ಕೊನೆಗೆ ಪಕ್ಷ ಎ.ಎನ್.ಎಂ. ಅವರಾದರೂ ಇದ್ದರೆ ಪ್ರಥಮ ಚಿಕಿತ್ಸೆಯ ನೆರವಾದರೂ ಕೊಡಬಹುದು. ಅದರ ಬಗ್ಗೆ ನಾನು ತಮ್ಮ ಹತ್ತಿರವೂ ಹೇಳಿದೆ, ಪ್ರತಿ ಕೇಂದ್ರಗಳಲ್ಲೂ ತಮ್ಮ ಇಲಾಖೆ ಹಾಗೂ ಜಿಲ್ಲಾ ಪಂಚಾಯಿತಿ ವತಿಯಿಂದ ವಸತಿ ಗೃಹವನ್ನು ನಿರ್ಮಿಸಿ ಅವಕಾಶ ಕಲ್ಪಿಸಿಕೊಡಬೇಕಾಗಿರುತ್ತದೆ. ಮತ್ತು ಒಂದೊಂದು ಕೇಂದ್ರದಲ್ಲಿ 40-50 ಗ್ರಾಮಗಳಿರುತ್ತವೆ. ಅಲ್ಲಿಗೆ ವೈದ್ಯರು ತೆರಳಿ ಜನರಿಗೆ ಶುಶ್ರೂಷೆ ನೀಡಲು ಒಂದು ವಾಹನ ಸೌಲಭ್ಯ ಕಲ್ಪಿಸಿಕೊಡದಿದ್ದರೆ ಆವೇಳೆಯಲ್ಲಿ ಏನಾದರೂ ವೈದ್ಯರಿಂದ ಚಿಕಿತ್ಸೆ ಕೊಡಿಸುವ ಪ್ರಸಂಗ ಬಂದರೆ ವೈದ್ಯರು ಅಲ್ಲಿಗೆ ಸಕಾಲದಲ್ಲಿ ಹೋಗಿ ಚಿಕಿತ್ಸೆ ನೀಡಲು ವಾಹನ ಇಲ್ಲದಿದ್ದರೆ ನಾವು ಅವರನ್ನು ದೂಷಿಸುವಂತಿಲ್ಲ. ಅಲ್ಲದೆ, ಅವರು ಹಳ್ಳಿಗೆ ಹೋಗಿ ಪ್ರವಾಸ ಮಾಡುವಂಥ ಸೌಲಭ್ಯವೂ ಇಲ್ಲ. ತಾವು ಒಟ್ಟಾರೆ ಸಮಸ್ಯೆಗೆ ಉತ್ತರ ಹೇಳಿದರೇ ಹೊರತು ಯಾವ್ಯಾವ ಸಮಸ್ಯೆಗಳಿಗೆ ಏನೇನು ಮಾಡಬೇಕೆಂಬುದನ್ನು ತಮ್ಮ ಗಮನಕ್ಕೆ ತಂದರೆ ಅಂತಹ ಅಗತ್ಯವಿರುವ ಕೇಂದ್ರಗಳಿಗಾದರೂ ಸೂಕ್ತ ಸೌಲಭ್ಯ ಕಲ್ಪಿಸಿಕೊಡದೆ ಹೋದರೆ ತಮ್ಮ ಮಾತುಗಳಿಂದ ನಮಗೆ ಸಮಾಧಾನವಾಗುವುದಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತೇನೆ.

ಡಾ|| ಹೆಚ್.ಸಿ. ಮಹದೇವಪ್ಪ : ವೈದ್ಯರಿಗೆ ವಸತಿ ಗೃಹ ಸೌಲಭ್ಯ ಕುರಿತು ಹೇಳುವುದಾದರೆ ಐ.ಪಿ.ಪಿ - 9ರಲ್ಲಿ ಸುಮಾರು 250ಕ್ಕೂ ಹೆಚ್ಚು ವೈದ್ಯರ ಕೊಠಡಿಗಳನ್ನು ನಿರ್ಮಾಣ ಮಾಡುವುದಕ್ಕೆ ಕ್ರಮ ಕೈಗೊಳ್ಳಲಾಗಿದೆ ಹಾಗೂ 1,000ಕ್ಕೂ ಹೆಚ್ಚು ಎ.ಎನ್.ಎಂ. ಅವರಿಗಾಗಿ ಕೊಠಡಿಗಳನ್ನು ನಿರ್ಮಿಸುವುದಕ್ಕೆ ಕ್ರಮ ತೆಗೆದುಕೊಳ್ಳುವುದರ ಜೊತೆಗೆ ವಿಶ್ವ ಬ್ಯಾಂಕ್ ನೆರವಿನಡಿಯಲ್ಲಿ ವೈದ್ಯರಿಗಾಗಿ ವಾಹನಗಳು ಮತ್ತು ಇನ್ನಿತರ ಸವಲತ್ತುಗಳನ್ನು ಕಲ್ಪಿಸಿ ಕೊಡುವುದಕ್ಕೆ 5-7 ವರ್ಷಗಳ ಅವಧಿಯಲ್ಲಿ ನಾವು ಹಂತ ಹಂತವಾಗಿ ವಿಭಾಗಗಳನ್ನು ಮಾಡಿಕೊಂಡು ಸಮಸ್ಯೆಗಳನ್ನು ನಿವಾರಿಸುವುದಕ್ಕೆ

ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ಮಾಡುತ್ತದೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಶಾಮನೂರು ಶಿವಶಂಕರಪ್ಪ : ಉಪಾಧ್ಯಕ್ಷರೇ, ಮಾನ್ಯ ಆರೋಗ್ಯ ಮಂತ್ರಿಗಳು ಅವರ ಉತ್ತರದಲ್ಲಿ ಏನು ಹೇಳುತ್ತಿದ್ದರೆಂದರೆ ಯಾವುದೇ ರಾಷ್ಟ್ರದಲ್ಲಿಯೂ ಉಚಿತವಾಗಿ ಔಷಧಿಯನ್ನು ಕೊಡತಕ್ಕ ವ್ಯವಸ್ಥೆ ಇಲ್ಲವೆಂದು. ಬೇರೆ ದೇಶಗಳಲ್ಲಿ ಆರೋಗ್ಯದ ಬಗ್ಗೆ ಸರ್ಕಾರವೇ ಹೊಣೆಯಾಗಿ ಸರ್ಕಾರವೇ ಎಲ್ಲಾ ಔಷಧಿಯ ಬೆಲೆಯನ್ನು ಭರಿಸತಕ್ಕ ಪದ್ಧತಿ ಇದೆ. ಅದನ್ನು ಮಾನ್ಯ ಆರೋಗ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಮತ್ತು ವೈದ್ಯರಿಗಾಗಿ ನಾವು 260 ಮನೆಗಳನ್ನು ಕಟ್ಟಿಸುತ್ತೇವೆಂದು ಹೇಳಿದ್ದಾರೆ. ಈಗ ಇರತಕ್ಕ ವೈದ್ಯರುಗಳ ಸಂಖ್ಯೆಗೆ ಅನುಗುಣವಾಗಿ ಆ ಮನೆಗಳು ಎಷ್ಟು ಪರಸೆಂಟ್ ಆಗುತ್ತದೆ? ಇದುವರೆಗೆ ಎಷ್ಟು ಪರಸೆಂಟ್ ಮನೆಗಳನ್ನು ಕಟ್ಟಿಸಿದಿದೀರಿ? ಮುಂದೆ ಎಷ್ಟು ಪರೆಸೆಂಟ್ ಮನೆಗಳನ್ನು ಕಟ್ಟಿಸುತ್ತೀರಿ? ಎಷ್ಟು ಮನೆಗಳ ಅವಶ್ಯಕತೆ ಇದೆ ಎನ್ನುವ ಬಗ್ಗೆ ಮಾನ್ಯ ಆರೋಗ್ಯ ಮಂತ್ರಿಗಳು ತಿಳಿಸಿದರೆ ಬಹಳ ಸಂತೋಷ.

ಡಾ|| ಯು. ಚಿತ್ತರಂಜನ್ : ಉಪಾಧ್ಯಕ್ಷರೆ, ಸನ್ಮಾನ್ಯ ಮಂತ್ರಿಗಳು ಬೇರೆ ರಾಷ್ಟ್ರಗಳಲ್ಲಿ ಉಚಿತವಾಗಿ ಔಷಧಿಯನ್ನು ಕೊಡುವ ವ್ಯವಸ್ಥೆ ಇಲ್ಲವೆಂದು ಏನು ಹೇಳಿದ್ದಾರೆ ಆ ರೀತಿ ಹಗುರವಾದ ಹೇಳಿಕೆಯನ್ನು ಕೊಡಬಾರದು. ಜೊತೆಗೆ ಅನೇಕ ವಿಷಯಗಳ ಬಗ್ಗೆ ಸಾಕಷ್ಟು ಅಭ್ಯಾಸ ಮಾಡಿ ಉತ್ತರವನ್ನು ಕೊಡಬೇಕಾಗುತ್ತದೆ. ಔಷಧಿಗಳ ಅಸಮತೋಲನವಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅವರು ನನ್ನನ್ನು ಕರೆದಿದ್ದಾರೆ, ನಾನು ಮಾತನಾಡಿದಮೇಲೆ ತಾವು ಮಾತನಾಡಿ. ನಿಮ್ಮ ಮತ್ತು ನಮ್ಮ ಕಳಕಳಿ ಒಂದೇ ಇದೆ, ಇಲ್ಲಿ ಪಕ್ಷದ ಪ್ರಶ್ನೆ ಬರುವುದಿಲ್ಲ, ಅಲ್ಲಿ ಕೆಲಸವಾಗಬೇಕು. ಅದಕ್ಕಾಗಿ, ಸನ್ಮಾನ್ಯ ಉಪಾಧ್ಯಕ್ಷರೆ, ನೇಮಕಾತಿಯಾಗದಿರುವುದರಿಂದ ವೈದ್ಯರುಗಳ ಸಂಖ್ಯೆ ಕಡಿಮೆ ಇದೆ, ಇದಕ್ಕೆ ಜಿಲ್ಲಾದಿಕಾರಿಗಳಿಗೆ ಅಧಿಕಾರಿವನ್ನು ಕೊಟ್ಟು ವ್ಯವಸ್ಥೆ ಮಾಡಲು ಹೇಳಿದ್ದೇವೆಂದು ಮಾನ್ಯ ಸಚಿವರು ಹೇಳಿದರು. ತಾವು ಎಂ.ಬಿ.ಬಿ.ಎಸ್.ಗೆ ಅವಕಾಶ ಕೊಟ್ಟಿದ್ದೀರಿ. ಆದರೆ ಎಲ್ಲಿ ಆಯುರ್ವೇದಿಕ್ ಆಸ್ಪತ್ರೆಗಳಿವೆ, ಆಯುರ್ವೇದಿಕ್‌ಗೆ ಅರ್ಜಿಯನ್ನು ಹಾಕಿದರೆ ಅದನ್ನು ನಿರ್ದೇಶಕರಿಗೆ ಕಳುಹಿಸಿದ್ದೀರಿ, ಅವರು ಅದಕ್ಕೆ ಕ್ವೆರಿಯನ್ನಾಕಿ ವಾಪಸ್ ಕಳುಹಿಸುವುದು, ಅವರನ್ನು ಕೇಳಿ, ಇವರನ್ನು ಕೇಳಿ ಎಂದು ಅದು ಹಲವಾರು ಬಾರಿ ವಾಪಸ್ ಬಂತು. ಆ ಅರ್ಜಿ ಒಪ್ಪಿಗೆಯಾಗಿಲ್ಲ, ಅನುಮತಿ ಸಿಕ್ಕಿಲ್ಲ. ನಮ್ಮಲ್ಲಿ ಒಂದು ಗ್ರಾಮದಲ್ಲಿ ಆಯುರ್ವೇದಿಕ್ ಆಸ್ಪತ್ರೆ ಇದೆ. ಅಲ್ಲಿ ಕೆಲಸ ಮಾಡುತ್ತೇವೆಂದು ಅರ್ಜಿಯನ್ನು ಹಾಕಿದರೆ ಹಲವಾರು ಬಾರಿ ಇವರು ವಾಪಸ್ ಕಳುಹಿಸಿದ್ದಾರೆ, ನಿಮ್ಮ ಅಧಿಕಾರಿ ಒಬ್ಬರ ಮೇಲೆ ಒಬ್ಬರು ಹೇಳುತ್ತಾರೆ. ಇದಕ್ಕೂ ಸಹ ತಾವು ಸೂಚನೆ ಕೊಡಬೇಕು. ಇಲ್ಲದಿದ್ದರೆ ಆಸ್ಪತ್ರೆಗಳಲ್ಲಿ ತೊಂದರೆಯಾಗುತ್ತದೆ. ಆಸ್ಪತ್ರೆಗಳು ಖಾಲಿ ಇರುತ್ತವೆ. ತಾವು 260 ಕಟ್ಟಡಗಳನ್ನು ಕಟ್ಟಿಸುತ್ತೇವೆಂದು ಹೇಳಿದ್ದೀರಿ. ಕೆಲವು ಕಡೆ ಈಗಾಗಲೇ ಕಟ್ಟಿಸಿರುವ ಆಸ್ಪತ್ರೆಗಳಲ್ಲಿ ಸುಣ್ಣ ಇಲ್ಲ, ಬಣ್ಣ ಇಲ್ಲ, ಕಿಟಕಿ ಇಲ್ಲ ಬಾಗಿಲು ಇಲ್ಲ, ಒಳಗಡೆ ಏನೇನೋ ಸೇರಿಕೊಳ್ಳುತ್ತಿವೆ. ದಯವಿಟ್ಟು ಅದರ ಬಗ್ಗೆ ಸಹ ಪರಿಶೀಲನೆ ಮಾಡಿ ಸರಿ ಮಾಡತಕ್ಕ ಅವಶ್ಯಕತೆ ಇದೆ. ಅದನ್ನು ತಾವು ಮಾಡಬೇಕೆಂದು ಹೇಳುತ್ತಿದ್ದೇನೆ.

ಡಾ|| ಹೆಚ್.ಸಿ. ಮಹದೇವಪ್ಪ : ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರುಗಳು ಅನೇಕ ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೆ. ಹಿರಿಯ ಸದಸ್ಯರಾದ ಗೌರವಾನ್ವಿತ ಶಿವಶಂಕರಪ್ಪನವರು ಸಲಹೆಯನ್ನು ಕೊಟ್ಟಿದ್ದಾರೆ. ಬಡತನ ರೇಖೆಗಿಂತ ಕೆಳಗಿರುವ ಜನರಿಗೆ ಉಚಿತವಾಗಿ ಔಷಧಿಯನ್ನು ಕೊಡಲು ಸರ್ಕಾರಕ್ಕೆ ಕಷ್ಟವಾಗುವುದಿಲ್ಲ. ಆದರೆ ಸನ್ಮಾನ್ಯ ಸದಸ್ಯರಾದ ಶಿವಶಂಕರಪ್ಪರಂಥ ಸಮರ್ಥರಾದಂಥವರ ಸಹಾಯ ರಾಜ್ಯದ ಎಲ್ಲಾ ಜನರಿಗೆ ಔಷಧಿಯನ್ನು ಕೊಡಲು ಆಗತ್ಯವಾಗ ಬೇಕಾಗಿದೆ, ಅವರ ನೇತ್ರತ್ವದಲ್ಲಿ ರಾಜ್ಯದ ಎಲ್ಲಾ ಜನರಿಗೆ ಸರ್ಕಾರದ ಕ್ರಮದ ಜೊತೆಗೆ ಔಷಧಿಯನ್ನು ಕೊಡಲು ಸಹಾಯವನ್ನು ಅವರು ಕೊಡಬೇಕೆಂದು ತಮ್ಮ ಮೂಲಕ ಅವರನ್ನು ವಿನಂತಿಸುತ್ತೇನೆ.

ಶ್ರೀ ಶಾಮನೂರು ಶಿವಶಂಕರಪ್ಪ : ಬೇರೆ ರಾಷ್ಟ್ರಗಳಲ್ಲಿ ಸರ್ಕಾರವೇ ಆರೋಗ್ಯದ ಬಗ್ಗೆ ಹೊಣೆ ಹೊರುತ್ತದೆ ಎನ್ನತಕ್ಕ ಅಭಿಪ್ರಾಯವನ್ನು ಮಾನ್ಯ ಮಂತ್ರಿಗಳಿಗೆ ಹೇಳುತ್ತಿದ್ದೇನೆ. ಎಲ್ಲರಿಗೂ ಔಷಧಿಯನ್ನು ಕೊಡಿ ಎಂದು ಹೇಳುತ್ತಿಲ್ಲ. ನನ್ನನ್ನು ಮುಖ್ಯಮಂತ್ರಿಯಾಗಿ ಮಾಡಿ ಆಗ ನಾನು ಆ ಕೆಲಸವನ್ನು ಮಾಡುತ್ತೇನೆ.

(ಗೊಂದಲ)

ಡಾ|| ಹೆಚ್.ಸಿ. ಮಹದೇವಪ್ಪ : ಮಾನ್ಯ ಸದಸ್ಯರಾದ ಗುರುಪಾದಪ್ಪ ನಾಗಮಾರಪಲ್ಲಿಯವರು ಪ್ರಸ್ತಾಪ ಮಾಡಿದಂಥ ಆಯುರ್ವೇದ ವೈದ್ಯರ ಬಗ್ಗೆ ಸಂಬಂಧಪಟ್ಟಂತೆ ಈಗಾಗಲೇ ಲೋಕಸೇವಾ ಆಯೋಗದಿಂದ ಸುಮಾರು 75 ಜನ ಆಯುರ್ವೇದಿಕ್ ವೈದ್ಯರ ನೇಮಕಾತಿಯಾಗಿದೆ. ಅವರುಗಳಿಗೆ ಸ್ಥಳಗಳನ್ನು ಸೂಚಿಸಲು ಕ್ರಮ ತೆಗೆದುಕೊಳುತ್ತಿದ್ದೇವೆ. ಅದರ ಜೊತೆಗೆ ಇನ್ನೂ ವೈದ್ಯರ ಕೊರತೆ ಇದೆ. ಆದ್ಯತ್ಯೆಯ ಮೇಲೆ ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ.

(ಗೊಂದಲ)

ಉಪಾಧ್ಯಕ್ಷರು : ಸದಸ್ಯರುಗಳು ಸ್ವಲ್ಪ ಅರ್ಥಮಾಡಿಕೊಳ್ಳಬೇಕು. ಈ ಸಮಸ್ಯೆಯ ಗಂಭೀರತೆಯನ್ನು ನೋಡಿ ಸಾಕಷ್ಟು ಜನರಿಗೆ ಅವಕಾಶ ಮಾಡಿಕೊಟ್ಟಿದ್ದೇನೆ. ಇದು ಇಡೀ ರಾಜ್ಯದ ಪ್ರಶ್ನೆಯೆಂದು ಸಾಕಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೇನೆ. ಬಹುಶಃ ಇಷ್ಟು ದಿವಸಗಳಲ್ಲಿ ಇಷ್ಟು ಅವಕಾಶ ಮಾಡಿಕೊಟ್ಟಿದ್ದುದು ಯಾವಾಗಲೂ ಆಗಿಲ್ಲ.

ಡಾ: ಯು. ಚಿತ್ತರಂಜನ್ : ಮಂತ್ರಿಗಳು ಉತ್ತರವನ್ನು ಕೊಡುವಾಗ ಸ್ಪೆಸಿಫಿಕ್ ಆಗಿ ಕೊಡಬೇಕು.

ಸೋಮವಾರಪೇಟೆ ತಾಲ್ಲೂಕಿನ ಕಿರಿಯ ಕಾಲೇಜುಗಳು

104 – ಶ್ರೀ ಅಪ್ಪಚ್ಚುರಂಜನ್ (ಸೋಮವಾರಪೇಟೆ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಮವಾರಪೇಟೆ ತಾಲ್ಲೂಕಿನಲ್ಲಿರುವ ಸರ್ಕಾರಿ ಕಿರಿಯ ಒಟ್ಟು ಕಾಲೇಜುಗಳೆಷ್ಟು? (ಹೆಸರುಗಳನ್ನು ನೀಡುವುದು)